**OS**– 167/2015 **ಡಿ ಡಬ್ಲ್ಯೂಃ1**

**ದಿಃ30.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಸ ಎಸ ಕೆ ರವರಿಂದ.**

ನಾನು ದಿಃ12–06–1974 ರಲ್ಲಿ ಜನಿಸಿರುತ್ತೇನೆ. ನಾನು ಪಿಯುಸಿವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಸದರಿ ದಾವಾ ಯಾರು–ಯಾರ ಮೇಲೆ ಹಾಕಿರುತ್ತಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಹೂಂ ಎನ್ನುತ್ತಾರೆ. ಸದರಿ ಕೇಸಗೆ ಯಾರು ಎನು ಉತ್ತರ ಕೊಟ್ಟಿದ್ದಾರೆಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಅದನ್ನು ತಿಳಿದುಕೊಂಡಿಲ್ಲ ಆದರೆ ಕೇಸ ಹಾಕಿರುವ ಬಗ್ಗೆ ಮಾಹಿತಿ ಇದೆ ಎನ್ನುತ್ತಾರೆ. ಈ ದಾವೆಯಲ್ಲಿ ನೀವು ಕೈಫಿಯತ್ತ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಈಗ ಕೊಡುತ್ತಿದ್ದೇನೆ ಎನ್ನುತ್ತಾರೆ. ಈ ಕೇಸನ ಪ್ರತಿವಾದಿ ನಂಬರ 2 ಬಸಪ್ಪ ಕಟ್ಟಿ ನನ್ನ ತಂದೆ. ಸದರಿಯವರು ಈ ಕೇಸನಲ್ಲಿ ಕೈಪಿಯತ್ತ ಸಲ್ಲಿಸಿದ್ದರಾ ಎಂದರೆ ಕೊಟ್ಟಿರಬಹುದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿ ನಂಬರ 3 ರಿಂದ 6 ರವರು ನ್ಯಾಯಾಲಯಕ್ಕೆ ಕೈಫಿಯತ್ತ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ ಕೊಟ್ಟಿರಬಹುದು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಸದರಿ ಕೇಸನ ಸಂಪೂರ್ಣ ಮಾಹಿತಿ ಯಾರಿಗೆ ಇದೆ ಎಂದರೆ ಸಾಕ್ಷಿ ನನಗೂ ಇದೆ ನನ್ನ ಅಣ್ಣ ಬಸಪ್ಪ ಸಂಕ್ರಪ್ಪ ಕಟ್ಟಿ ಇವರಿಗೂ ಇದೆ ಎನ್ನುತ್ತಾರೆ. ದಾವಾ ಚಾಲ್ತಿಯಲ್ಲಿದ್ದಾಗ ಕಲಾವತಿ ಕಟ್ಟಿ ಇವರನ್ನು ದಾವಾದಲ್ಲಿ ಸೇರ್ಪಡೆ ಮಾಡಿದ ವಿಷಯ ನಿಮಗೆ ಗೊತ್ತಿದೇಯಾ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ಸದರಿ ಕಲಾವತಿ ನನ್ನ ಹೆಂಡತಿ. ಅವರು ಈ ದಾವೆಯಲ್ಲಿ ಕೈಪಿಯತ್ತ ಸಲ್ಲಿಸಿದ್ದಾರಾ ಎಂದರೆ ಸಾಕ್ಷಿ  ಅದು ನನಗೆ ಗೊತ್ತಿಲ್ಲ ಆದರೆ ದಾಖಲೆ ಹಾಜರುಪಡಿಸಿದ್ದಾರೆ ಎನ್ನುತ್ತಾರೆ. ಸಾಕ್ಷಿ ಲಿಖಿತವಾಗಿ ಬರೆಯಿಸಿ ವಕೀಲರ ಕಡೆಯಿಂದ ಹಾಕಿಸಿರುತ್ತೇವೆ ಎನ್ನುತ್ತಾರೆ. ವಾದಿ ಸಲ್ಲಿಸಿರುವ ದಾವೆಗೆ ವಾದಿಗೆ ಬೇರೆ ವಕೀಲರು ಮತ್ತು ನಮಗೆ ಅಂದರೆ ಎಲ್ಲ ಪ್ರತಿವಾದಿಯರಿಗೂ ನಮ್ಮ ವಕೀಲರಾದ ಶ್ರೀ ಎಂ ಎಸ ಬಿ ಇರುತ್ತಾರೆ ಎನ್ನುತ್ತಾರೆ.

ಕಟ್ಟಿ ಮನೆತನ ಮೂಲತಃ ಕಸಬು ಕೃಷಿ ಎಂದರೆ ಸರಿ. ಸದರಿಯವರ ಮೂಲ ಪುರುಷ ಚನ್ನಪ್ಪ ಕಲ್ಲಪ್ಪ ಕಟ್ಟಿ ಎಂದರೆ ಸರಿ. ಸದರಿಯವರು 1987 ರಲ್ಲಿ ಮರಣ ಹೊಂದಿರುತ್ತಾರೆ. ಅವರ ಹೆಂಡತಿ ನಾಗವ್ವ ಅವರು ಮರಣ ಹೊಂದಿದ 6-7 ತಿಂಗಳ ನಂತರ ಮರಣ ಹೊಂದಿರುತ್ತಾರೆ. ಅವರಿಗೆ ಮಕ್ಕಳೆಂದರೆ ಹಿರಿಯರು ಬಸವ್ವ (ಪ್ರತಿವಾದಿ ನಂಬರ 1) ಅವರ ನಂತರ ಪ್ರತಿವಾದಿ 2, ನಂತರ ಪ್ರತಿವಾದಿ 3 ಆ ನಂತರ ಪ್ರತಿವಾದಿ ನಂಬರ 4, ನಂತರ ಪ್ರತಿವಾದಿ ನಂಬರ 5, ನಂತರ ಕಲ್ಲಪ್ಪ, ಆ ನಂತರ ನೀಲವ್ವ. ಮೂಲ ಪುರಷ ಚನ್ನಪ್ಪ ಕಟ್ಟಿ ಇವರಿಗೆ ಮಕ್ಕಳೆಂದರೆ ಈ ಮೇಲೆ ಹೇಳಿದವರೆಂದರೆ ಸರಿ. ಅವರಲ್ಲಿ 2008 ನೇ ಸಾಲಿನಲ್ಲಿ ಅವರ ಮಗ ಕಲ್ಲಪ್ಪ ಕಟ್ಟಿ ಮರಣ ಹೊಂದಿರುತ್ತಾರೆಂದರೆ ಸರಿ. ಅವರ ಹೆಂಡತಿ ವಾದಿ ನಂಬರ 1 ಎಂದರೆ ಸರಿ. ಅವರ ಮಕ್ಕಳು ವಾದಿ ನಂಬರ 2 ರಿಂದ 5 ಎಂದರೆ ಸರಿ.

ಚನ್ನಪ್ಪ ತಂದೆ ಕಲ್ಲಪ್ಪ ಕಟ್ಟಿ ಮೂಲ ಪುರಷ ನಮ್ಮ ಮನೆತನದ ಸಾಕಷ್ಟು ಜಮೀನು ಸರ್ಕಾರಕ್ಕೆ ಸ್ವಾಧೀನಗೊಂಡಿತ್ತು ಎಂದರೆ ಸರಿ. ಎಷ್ಟು ಎಕರೆ ಜಮೀನು ಸ್ವಾಧೀನಗೊಂಡಿತ್ತು ಎಂದರೆ ಸಾಕ್ಷಿ 51 ಎಕರೆ 21 ಗುಂಟೆ ಎಂದು ನುಡಿಯುತ್ತಾರೆ. ಸದರಿ ಸ್ವಾಧೀನವನ್ನು ಕೆಐಎಡಿಬಿರವರು ಮಾಡಿರುತ್ತಾರೆ. ಸದರಿ ಸ್ವಾಧೀನಗೊಂಡ ಪ್ರಕಾರ ಪರಿಹಾರ ಬಂದಿತ್ತಾ ಎಂದರೆ ಸಾಕ್ಷಿ ಸ್ವಲ್ಪ ಮಟ್ಟಿಗೆ ಬಂದಿದೆ ಇನ್ನು ಬರಬೇಕೆನ್ನುತ್ತಾರೆ. 25 ಎಕರೆಗೆ ಸಂಬಂಧಿಸಿದಂತೆ ಪರಿಹಾರ ಬರುವುದು ಬಾಕಿ ಇದೆ ಎನ್ನುತ್ತಾರೆ. ಪರಿಹಾರಕ್ಕೆ ಸಂಬಂಧಿಸಿದಂತೆ ಸ್ವಾಧೀನಗೊಂಡ ಜಮೀನ ಬಗ್ಗೆ ನ್ಯಾಯಾಲಯದಲ್ಲಿ ಕೇಸ ಚಾಲ್ತಿಯಲ್ಲಿತ್ತಾ ಎಂದರೆ ಸಾಕ್ಷಿ ಇದುವರೆಗೆ ಇತ್ತು ಈಗ ಇಲ್ಲ ಎನ್ನುತ್ತಾರೆ. ಸಾಕ್ಷಿ ನ್ಯಾಯಾಲಯ ಹಳೆ ಕಟ್ಟಡದಲ್ಲಿದ್ದಾಗ ಇತ್ತು ಎನ್ನುತ್ತಾರೆ. ಆ ಕೇಸನ್ನು ಯಾರು ಸಲ್ಲಿಸಿದ್ದರು ಎಂದರೆ ಸಾಕ್ಷಿ ನನ್ನ ತಂದೆ ಎಂದರೆ ಈ ಕೇಸನ 2 ನೇ ಪ್ರತಿವಾದಿ ಎನ್ನುತ್ತಾರೆ. ನನ್ನ ತಂದೆಯನ್ನು ಬಿಟ್ಟು ಆ ಕೇಸನಲ್ಲಿ ಮನೆತನದ ಬೇರೆ ಯಾರು ವ್ಯಕ್ತಿಗಳು ಇರಲಿಲ್ಲವೆಂದರೆ ಸಾಕ್ಷಿ 7 ಮಂದಿ ನಮ್ಮ ಅತ್ತೆಯವರನ್ನು ಒಳಗೊಂಡು ಎಲ್ಲರು ಇದ್ದರು ಎನ್ನುತ್ತಾರೆ. ಆ ಕೇಸ ಎನು ತೀರ್ಮಾನವಾಯಿತು ಎಂದರೆ ಸಾಕ್ಷಿ ಇನ್ನು ತೀರ್ಮಾನವಾಗಿಲ್ಲ ಎನ್ನುತ್ತಾರೆ. ಸದರಿ ಕೇಸ ಇನ್ನು ಚಾಲ್ತಿಯಲ್ಲಿದೆ ಎಂದರೆ ಸಾಕ್ಷಿ ನಾವು ನಡೆಸಲು ಹೋಗುತ್ತಿಲ್ಲ ಎನ್ನುತ್ತಾರೆ. ಸದರಿ ಆ ಕೇಸ ಎನಾಗಿದೆ ಎಂಬುವುದನ್ನು ತಿಳಿದುಕೊಳ್ಳಲು ಹೋಗಿಲ್ಲವೆಂದರೆ ಸಾಕ್ಷಿ ಹೋಗಿಲ್ಲ ಎನ್ನುತ್ತಾರೆ. ಆ ಕೇಸನ ನಂಬರ ಹೇಳಲು ಆಗುತ್ತದೇಯಾ ಎಂದರೆ ಸಾಕ್ಷಿ ನೆನಪಿಲ್ಲ ಎನ್ನುತ್ತಾರೆ. ಆ ಕೇಸನಲ್ಲಿ ನ್ಯಾಯಾಲಯಕ್ಕೆ ಹಾಜರಾಗುವ ಕೆಲಸವನ್ನು ನನ್ನ ತಂದೆಯೇ ಮಾಡುತ್ತಿದ್ದರು ಮತ್ತು ಅರ್ಜಿ

ಸಲ್ಲಿಸುವ ಸಹಿ ಮಾಡುವ ಕೆಲಸವನ್ನು ಕೂಡಾ ನನ್ನ ತಂದೆಯೇ ಮಾಡುತ್ತಿದ್ದರು. ಆ ಕೇಸನಲ್ಲಿ ವಾದಿ ಪಕ್ಷಗಾರರು ಅಲ್ಲವೆಂದರೆ ಸಾಕ್ಷಿ ಅವರು ಅರ್ಜಿ ಹಾಕಿಕೊಂಡು ಹೋಗಬೇಕು ಎನ್ನುತ್ತಾರೆ. ಆ ಕೇಸನಲ್ಲಿ ನಿಮ್ಮ ತಂದೆಯವರು ಕೆಐಎಡಿಬಿರವರ ಜೊತೆ ರಾಜೀ ಮಾಡಿಕೊಂಡರಾ ಎಂದರೆ ಸಾಕ್ಷಿ ಶೇಕಡಾ 25 ರಷ್ಟು ರಾಜಿ ಆಗಿದೆ ಪೂರ್ಣ ಆಗಿಲ್ಲ ಎನ್ನುತ್ತಾರೆ. ಭಾಗಶಃ ರಾಜಿ ಎಂದು ಹೇಳಿದ್ದು ಅದರ ಪ್ರಕಾರ ಕೆಐಎಡಿಬಿರವರು ಮಾಡಿದಂತಹ ಪ್ಲಾಟಗಳನ್ನು ಕೊಡಬೇಕೆಂದು ಮಾತುಕತೆಯಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಬಾಯಿ ಮಾತಿನಲ್ಲಿ ಆಗಿದೆ ಆದರೆ ಲಿಖಿತವಾಗಿ ಯಾವುದು ಆಗಿಲ್ಲ ಎನ್ನುತ್ತಾರೆ. ಆ ಪ್ರಕಾರ ಕೆಐಎಡಿಬಿರವರು ಪ್ಲಾಟ ಕೊಟ್ಟಿರುತ್ತಾರೆಂದರೆ ಸಾಕ್ಷಿ ಪ್ಲಾಟ ಕೊಟ್ಟಿಲ್ಲ ನಮಗೆ ಡಿಮ್ಯಾಂಡ ನೋಟಿಸ ನೀಡಿರುತ್ತಾರೆ, ಸಾಕ್ಷಿ ಪ್ರತಿ ಎಕರೆಗೆ ಇಷ್ಟು ಹಣ ಕಟ್ಟಬೇಕೆಂದು ನೋಟಿಸ ಕೊಟ್ಟಿರುತ್ತಾರೆ ಎನ್ನುತ್ತಾರೆ. ಡಿಮ್ಯಾಂಡ ನೋಟಿಸನ್ನು ಯಾರಿಗೆ ಕೊಟ್ಟಿರುತ್ತಾರೆಂದರೆ ಸಾಕ್ಷಿ ಕಟ್ಟಿ ಮನೆತನದವರಿಗೆ ಕೆಐಎಡಿಬಿರವರು ನಿರ್ಮಿಸಲಾದ ಪ್ಲಾಟಗಳ ಖರೀದಿ ಕುರಿತು ಹಣ ಸಂದಾಯ ಮಾಡಬೇಕೆಂದು ಡಿಮ್ಯಾಂಡ ನೋಟೀಸ ಕೊಟ್ಟಿರುತ್ತಾರೆ. ಡಿಮ್ಯಾಂಡ ನೋಟೀಸನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿ. ನೋಟೀಸ ಪ್ರಕಾರ ಹಣ ಕಟ್ಟಿದ ಮೇಲೆ ಕೆಐಎಡಿಬಿರವರು ಪ್ಲಾಟ ಕೊಟ್ಟಿರುತ್ತಾರೆಂದರೆ ಸಾಕ್ಷಿ ನಾವು ಹಣ ಕಟ್ಟಿಲ್ಲ ಆ ಕಾರಣಕ್ಕೆ ಪ್ಲಾಟ ಕೊಟ್ಟಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಕೆಐಎಡಿಬಿರವರವರಿಗೆ ಹಣ ಸಂದಾಯ ಮಾಡಿ ತಾರೀಹಾಳ ಗ್ರಾಮದಲ್ಲಿ ಒಂದು ಪ್ಲಾಟ ಖರೀದಿ ಆಗಿದೆ ಎಂದರೆ ಸಾಕ್ಷಿ ಹೌದು ಒಂದು ಪ್ಲಾಟನ್ನು ನಾನು ಸರ್ವೆ ನಂಬರ 90 ರಲ್ಲಿ ಬ್ಲಾಕ ನಂಬರ 128 ಪಿ ಯನ್ನು ನನ್ನ ಸ್ವಂತ ಖರ್ಚಿನಿಂದ ನಾನು ಹಿಡಿದಿದ್ದೇನೆ ಎನ್ನುತ್ತಾರೆ. ನಿಶಾನೆ ಪಿ 135 ಈ ಪ್ರಕಾರ ನನ್ನ ಹೆಸರಿನಲ್ಲಿ ಖರೀದಿ ಆಗಿದೆ ಎಂದರೆ ಸಾಕ್ಷಿ ಆಗಿದೆ ಎನ್ನುತ್ತಾರೆ. ಸದರಿ ಖರೀದಿಗೆ 1 ಲಕ್ಷ್ಯ ರೂಪಾಯಿ ಕೊಟ್ಟಿದ್ದು ಕಟ್ಟಿ ಮನೆತನದ ಹಣ ಎಂದರೆ ಸಾಕ್ಷಿ ನಾನು ಹಾಲಿನ ವ್ಯಾಪಾರ ಮಾಡುತ್ತಿದ್ದು ಅದರಿಂದ ಗಳಿಸಿದ ಹಣದಿಂದ ಕೊಟ್ಟಿರುತ್ತೇನೆ ಎನ್ನುತ್ತಾರೆ. ಕೆಐಎಡಿಬಿರವರು ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದು ಆ ಸಂಬಂಧ ನಮ್ಮ ಅವರ ನಡುವೆ ರಾಜಿ ಮಾತುಕತೆ ಆಗಿದ್ದು ಆ ರಾಜಿ ಮಾತುಕತೆ ಪ್ರಕಾರ ಕಟ್ಟಿ ಮನೆತನದಿಂದ ಹಣ ತುಂಬಿಸಿಕೊಂಡು ಕೊಟ್ಟಂತಹ ಪ್ಲಾಟ ಇದು ಎಂದರೆ ಸಾಕ್ಷಿ ಮನೆತನದ ಹಣದಿಂದ ತೆಗೆದುಕೊಂಡ ಪ್ಲಾಟ ಅಲ್ಲ ಎನ್ನುತ್ತಾರೆ. ಸದರಿ ನಿಶಾನೆ ಪಿ 135 ರ ಪ್ರಕಾರ ಬಂದಂತಹ ಪ್ಲಾಟ ನಮ್ಮ ಮನೆತನದ ಪರವಾಗಿ ನನ್ನ ಹೆಸರಿಗೆ

ರಾಜೀ ಮೂಲಕ ಕೊಟ್ಟಂತಹ ಪ್ಲಾಟ ಎಂದರೆ ಸಾಕ್ಷಿ ಅದು ನನ್ನ ಸ್ವಯಾರ್ಜಿತ ಆಸ್ತಿ ಎನ್ನುತ್ತಾರೆ. ಕಟ್ಟಿ ಮನೆತನ ಹಾಗೂ ಕೆಐಎಡಿಬಿರವರ ಮಧ್ಯ ಎನು ರಾಜಿ ಮಾತುಕತೆ ಆಗಿದೆ ಎಂಬ ವಿಷಯ ನಮ್ಮ ತಂದೆಗೆ ಮಾತ್ರ ಗೊತ್ತು ಎಂದರೆ ಸಾಕ್ಷಿ ಎಲ್ಲರಿಗೂ ಗೊತ್ತು ಎನ್ನುತ್ತಾರೆ. ರಾಜಿ ಮಾತುಕತೆಯಾಗಿದ್ದು ವಾದಿ ಹಾಗೂ ಅವರ ಮಕ್ಕಳಿಗೆ ಗೊತ್ತೆಯೆ ಇಲ್ಲ ಎಂದರೆ ಸಾಕ್ಷಿ ಗೊತ್ತಿದೆ ಅದರಲ್ಲಿ ಸ್ವಲ್ಪ ಹಣ ಎಂದರೆ 68 ಲಕ್ಷ್ಯ ರೂಪಾಯಿಗಳನ್ನು ಪಡೆದಿದ್ದಾರೆಂದು ನುಡಿಯುತ್ತಾರೆ, ಸದರಿ 68 ಲಕ್ಷ್ಯ ರೂಪಾಯಿಗಳನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ SC/ST ASSOCIATION ರವರು ಕೊಟ್ಟಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿ ವಾದಿಯರಿಗೆ SC/ST ASSOCIATION ರವರು ಹಣ ಕೊಟ್ಟ ಬಗ್ಗೆ ನೀವು ನಿಮ್ಮ ಕೈಪಿಯತ್ತನಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಅದರಲ್ಲಿ ಹೇಳಿಲ್ಲ ಎನ್ನುತ್ತಾರೆ. ಸದರಿ SC/ST ASSOCIATION ರವರಿಗೆ ಆಸ್ತಿ ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿ ಖರೀದಿ ಮಾಡಿಕೊಳ್ಳುತ್ತೇವೆ ಎಂದು ಹೇಳಿ ಅವರು ಮುಂಗಡ ಹಣ ಕೊಟ್ಟಿರುತ್ತಾರೆ. ಯಾರಿಗೆ ಎಷ್ಟು ಹಣ ಕೊಟ್ಟಿರುತ್ತಾರೆಂದರೆ ಪ್ರತಿವಾದಿ 2 ನೇದವರಿಗೆ 11 ಲಕ್ಷ್ಯ ರೂಪಾಯಿ, ಪ್ರತಿವಾದಿ 3 ನೇದರವರಿಗೆ 25 ಲಕ್ಷ್ಯ ರೂಪಾಯಿ, ಪ್ರತಿವಾದಿ 4 ರಿಂದ 6 ರವರಿಗೆ ಯಾವುದೇ ಹಣ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಯಾವ ಆಸ್ತಿ ತೆಗೆದುಕೊಳ್ಳುವುದರ ಬಗ್ಗೆ ಅವರು ಮುಂಗಡ ಹಣ ಕೊಟ್ಟಿರುತ್ತಾರೆಂದರೆ ಸಾಕ್ಷಿ ದಾವಾ ಶೆಡ್ಯೂಲ್ **ಡ** ಅಂದರೆ ಬ್ಲಾಕ ನಂಬರ 68 ಒಟ್ಟು ಕ್ಷೇತ್ರ 51 ಎಕರೆ 23 ಗುಂಟೆ ಇದರಲ್ಲಿ 49 ಎಕರೆ 24 ಗುಂಟೆ ಕರಾಬು ಕಳೆದು. ಸದರಿ ಈ ಜಮೀನನ್ನು ನನ್ನ ಅಜ್ಜ ಅಂದರೆ ಮೂಲ ಪುರುಷ ಚನ್ನಪ್ಪ ಕಟ್ಟಿ ಇವರ ಜೀವಿತ ಅವಧಿಯಲ್ಲಿಯೇ ಕೆಐಎಡಿಬಿರವರು ಸ್ವಾಧೀನಪಡಿಸಿಕೊಂಡಿದ್ದರು ಎಂದರೆ ಸರಿ. ಅವತ್ತಿನಿಂದ ಕೆಐಎಡಿಬಿರವರು ಸದರಿ ಜಮೀನಿಗೆ ಮಾಲೀಕರು ಹಾಗೂ ಸ್ವಾಧೀನದಾರರು ಎಂದರೆ ಸಾಕ್ಷಿ 2018 ರವರೆಗೂ ನಾವು ಕಬ್ಜಾದಾರರ ಕಾಲಂನಲ್ಲಿ ಕೇವಲ 20 ಎಕರೆಗೆ ಇದ್ದೇವೆಂದು ಸಾಕ್ಷಿ ನುಡಿಯುತ್ತಾರೆ. 51 ಎಕರೆ ಜಮೀನನ್ನು ಕೆಐಎಡಿಬಿರವರು ಸ್ವಾಧೀನಪಡಿಸಿಕೊಳ್ಳುತ್ತಿದ್ದೇವೆಂದು ಹೇಳಿ ನಮಗೆ ನೋಟೀಸ ನೀಡಿದ್ದರು ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಸ್ವಾಧೀನ ಪಡೆದಿದ್ದೇವೆಂದು gazette notification ಕೂಡಾ ಆಗಿದೆ ಎಂದರೆ ಸಾಕ್ಷಿ ಆಗಿಲ್ಲ ಎನ್ನುತ್ತಾರೆ. ಸದರಿ ಸ್ವಾಧೀನಪಡೆದುಕೊಳ್ಳುವುದು ತಪ್ಪು ಇದೆ ಎಂದು ನೀವಾಗಲಿ ನಿಮ್ಮ ತಂದೆಯಾಗಲಿ ಎಲ್ಲಿಯೂ ಪ್ರಶ್ನೆ ಮಾಡಿಲ್ಲವೆಂದರೆ ಸಾಕ್ಷಿ

ಬೆಂಗಳೂರು ಉಚ್ಚ ನ್ಯಾಯಾಲಯದಲ್ಲಿ ನಾವು 20 ಎಕರೆಗೆ ಸಂಬಂಧಿಸಿದಂತೆ ಪ್ರಶ್ನೆ ಮಾಡಿರುತ್ತೇವೆ ಎನ್ನುತ್ತಾರೆ. ಸದರಿ ಕೇಸ ಕೇವಲ ಪರಿಹಾರ ಹಣವನ್ನು ಹೆಚ್ಚಿಸುವ ಸಲುವಾಗಿ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಒಟ್ಟಿನಲ್ಲಿ 1 ಎಕರೆಗೆ 8 ಸಾವಿರ ರೂಪಾಯಿ ಆಗಿದ್ದು ಅದಕ್ಕೆ ಶೇಕಡಾ 12 ರಷ್ಟು ಬಡ್ಡಿ ಸೇರಿಸಿ ಕೊಡುವಂತೆ ಆದೇಶ ಮಾಡಿದರು ಎನ್ನುತ್ತಾರೆ. ಕೆಐಎಡಿಬಿರವರು ಸ್ವಾಧೀನಪಡಿಸಿಕೊಂಡದನ್ನು ನ್ಯಾಯಾಲಯವು ರದ್ದು ಪಡಿಸಿಲ್ಲವೆಂದರೆ ಸರಿ. ಕೆಐಎಡಿಬಿ ವಿರುದ್ಧ ಅರ್ಜಿಯನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ ಪ್ರತಿವಾದಿ ನಂಬರ 2 ಅಂದರೆ ನನ್ನ ತಂದೆ ಮತ್ತು ನನ್ನ ಕಾಕಾ ಅಂದರೆ ಪ್ರತಿವಾದಿ 3 ರವರು ಸೇರಿಸಿ ಕೊಟ್ಟಿರುತ್ತಾರೆ ಎನ್ನುತ್ತಾರೆ. ಕೆಐಎಡಿಬಿರವರು ಸ್ವಾಧೀನಪಡಿಸಿಕೊಂಡಿದ್ದು ನಂತರ ಎನಾಯಿತು ಎಂಬ ಬಗ್ಗೆ ಈ ಕೇಸನ ಯಾವುದೇ ಪ್ರತಿವಾದಿಯರು ಲಿಖಿತವಾಗಿ ತಮ್ಮ ತಕರಾರಿನಲ್ಲಿ ನಮೂದು ಮಾಡಿಲ್ಲವೆಂದರೆ ಸಾಕ್ಷಿ ನ್ಯಾಯಾಲಯದ ಗಮನಕ್ಕೆ ತಂದಿದ್ದೇವೆ ಎನ್ನುತ್ತಾರೆ. ಆ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಹಾಜರುಪಡಿಸಿದ್ದೇವೆ ಎನ್ನುತ್ತಾರೆ. 51 ಎಕರೆ ಜಮೀನು ಸ್ವಾಧೀನಪಡಿಸಿಕೊಂಡಿದ್ದರ ಕುರಿತು ಮತ್ತು ಹಣ ಸಂದಾಯವಾಗಿದ್ದರ ಕುರಿತು ಯಾರಿಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಎಲ್ಲರಿಗೆ ಇದೆ ಎನ್ನುತ್ತಾರೆ. ಈ ಸಂಬಂಧ ನಿಮ್ಮ ದಾಖಲೆಗಳಲ್ಲಿ ಯಾವ ದಾಖಲೆ ಇದೆ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿ ಕೆಐಎಡಿಬಿ ಸ್ವಾಧೀನ ಕುರಿತು ನಿಶಾನೆ ಡಿ series ನಲ್ಲಿ ಯಾವುದೇ ದಾಖಲೆಗಳು ಇಲ್ಲ ಎನ್ನುತ್ತಾರೆ. ಸದರಿ ದಾಖಲೆಗಳು ಯಾರ ಕಡೆ ಇವೆ ಎಂದರೆ ಸಾಕ್ಷಿ ನನ್ನ ಬಳಿ ಇಲ್ಲ ಆದರೆ ವಾದಿ 1 ರವರ ಬಳಿ ಇದೆ ಎನ್ನುತ್ತಾರೆ. ಸದರಿ ವಾದಿರವರ ಬಳಿ ಯಾವುದೇ ದಾಖಲೆ ಇಲ್ಲ ಅವರಿಗೆ ಈ ವಿಷಯವೆ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ಕೆಐಎಡಿಬಿಗೆ ಸಂಬಂಧಿಸಿದಂತೆ ನಡೆಸುತ್ತಿದ್ದ ಪ್ರಕರಣಗಳ ದಾಖಲೆಗಳು ನನ್ನ ತಂದೆಯಾದ 2 ನೇ ಪ್ರತಿವಾದಿ ಬಳಿ ಇವೆ ಎಂದರೆ ಸಾಕ್ಷಿ ಎಲ್ಲರಿಗೂ ಒಂದು ಒಂದು set ಜರಾಕ್ಸ ಮಾಡಿ ಕೊಟ್ಟಿರುತ್ತೇವೆ ಎನ್ನುತ್ತಾರೆ. ಅದರ ಮೂಲ ದಾಖಲೆ ಯಾರ ಬಳಿ ಇವೆ ಎಂದರೆ ಸಾಕ್ಷಿ ಕೋರ್ಟನಲ್ಲಿ ಇವೆ ಎನ್ನುತ್ತಾರೆ. ಕೋರ್ಟಗೆ ಯಾರು ಹಾಜರುಪಡಿಸಿರುತ್ತಾರೆಂದರೆ ಸಾಕ್ಷಿ ನನ್ನ ತಂದೆ ಮತ್ತು ನನ್ನ ಕಾಕಾ ಎನ್ನುತ್ತಾರೆ. ಯಾವ-ಯಾವ ನ್ಯಾಯಾಲಯದಲ್ಲಿ ದಾಖಲೆಗಳನ್ನು ಹಾಜರುಪಡಿಸಿದ್ದೀರೋ ಅದರ ಪ್ರತಿ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಬಹುದಾ

ಎಂದರೆ ನಮಗೆ ಹಾಜರುಪಡಿಸಲು ಆಗುವುದಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕೆ ಹಾಜರುಪಡಿಸುವುದಿಲ್ಲವೆಂದರೆ ಸಾಕ್ಷಿ ನನ್ನ ತಂದೆಗೆ ಕಾಲು ಇಲ್ಲ ನನಗೂ ಅಡ್ಡಾಡಲು ಆಗುವುದಿಲ್ಲ ಆ ಕಾರಣಕ್ಕೆ ಹಾಜರುಪಡಿಸಲು ಆಗುವುದಿಲ್ಲ ಎನ್ನುತ್ತಾರೆ. ಸದರಿ ಸ್ವಾಧೀನಕ್ಕೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ಯಾವ–ಯಾವ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿದ್ದವು ಎಂದು ಆ ಪ್ರಕರಣದ ಸಂಖ್ಯೆಗಳನ್ನು ಕೊಡಬಹುದು ಎಂದರೆ ಸಾಕ್ಷಿ ನನಗೆ ಅಡ್ಡಾಡಲು ಆಗುವುದಿಲ್ಲ ಆ ಕಾರಣಕ್ಕೆ ಕೊಡಲು ಆಗುವುದಿಲ್ಲ ಎನ್ನುತ್ತಾರೆ. ವಾದಿಗೆ 51 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪರಿಹಾರದ ಹಣ ಕೊಡಬಾರದೆಂಬ ಉದ್ದೇಶದಿಂದ ನಾನಾಗಲಿ ನನ್ನ ತಂದೆಯಾಗಲಿ ಉದ್ದೇಶಪೂರ್ವಕವಾಗಿ ಆ ದಾಖಲೆಗಳನ್ನು ಕೊಡುತ್ತಿಲ್ಲವೆಂದರೆ ಸಾಕ್ಷಿ ಅವರಿಗೂ ಮಾಹಿತಿ ಇದೆ ಆ ಕಾರಣಕ್ಕೆ ನನ್ನ ಉದ್ದೇಶ ಎನು ಇಲ್ಲ ಎನ್ನುತ್ತಾರೆ. ನ್ಯಾಯಾಲಯವು ನಿರ್ದೇಶನ ಕೊಟ್ಟರೆ ನೀವು details ಕೊಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಕೊಡಲು ಆಗುವುದಿಲ್ಲ ಎನ್ನುತ್ತಾರೆ, ಕಾರಣ ಅದು 1984 ನೇ ಇಸ್ವಿಯ ದಾಖಲೆಗಳು ಆ ಕಾರಕ್ಕೆ ಕೊಡಲು ಆಗುವುದಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿ ಪರ ವಕೀಲರು ಸಮಯವಕಾಶ ಕೋರಿದ್ದು, ನೀಡಿ ಮುಂದುಡಲಾಯಿತು)

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ